Estd : 1986
K.U. Code No. 1210

Shree Jagadguru Murugharajendra Vidya Peetha (R) Chitradurga's

S.J.M.V. Mahantha First Grade Arts & Commerce College
Rayapur, Dharwad-580009

Ph : +91 0836-2950300
Fax : +91 0836-2950300

E-mail : sjmvmahantha@gmail.com
Granted permanent Affilliation by Karnataka University, Dharwad
Website: sjmvdharwad.com

Ref. No. SJMV/WC/ Date ..........................

# Translation Version of Government order
## Government of Karnataka

No: DCE:209:AS:ADMN:2002-03 Commissioner of College Education office
Banglore-01 Date: 09-01-2003

Circular

**Subject: Regarding to bring Transparency in Admission of First year Degree in Karnataka State Degree Colleges,**

To Bring Transparency in First Year Degree Admission of degree Colleges on the basis Supreme Court order and Karnataka education Law the following Guidelines are prepared. The Government! Private Aided and Private Aided Minority institutions compulsorily follow the Guidelines with effect from 2003-2004 Academic Years.

1. Colleges should publish well in advance the seats available for the first year degree classes on notice board/website before admission process. This publication of Admission number is to be based on affiliation wise Roaster System. Affiliation wise how many sections are available should be mentioned. This Publication wise/sections should be taken permission from universities. Admissions of students should be as per concerned universities specifications.

| | Earmarked Seats: Percentage | Total Available Seats | | |
|---|---|---|---|---|
| | | B.Sc | B.Com | B.A |
| | (100%) | 200 | 100 | 300 |
| Category: | | | | |
| General | 50 | 100 | 50 | 150 |
| Scheduled Caste | 15 | 30 | 15 | 45 |
| Scheduled Tribe | 03 | 06 | 03 | 09 |
| Cat-I | 04 | 08 | 04 | 12 |
| 2-A | 15 | 30 | 15 | 45 |
| 2-B | 04 | 08 | 04 | 12 |
| 3-A | 04 | 08 | 04 | 12 |
| 3-B | 05 | 10 | 05 | 15 |

Co-Ordinator
NAAC
S.J.M.V. Mahantha College,
Dharwad.

Principal
S.J.M.V. Mahantha First Grade
Arts & Commerce College,
Rayapur, Dharwad-580 009.

S.J.M.V. MAHANTHA FIRST GRADE ARTS & COMMERCE COLLEGE ★ RAYAPUR DHARWAD

ಕರ್ನಾಟಕ ಸರ್ಕಾರ

ಸಂಖ್ಯೆ:ಕಾಶಿಇ:209:ಶೈವಿಪ್ರವೇಶ:2002-03

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು-1, ದಿನಾಂಕ:08-01-2003

## ಸುತ್ತೋಲೆ

ವಿಷಯ:- ಕರ್ನಾಟಕ ರಾಜ್ಯದ ಪದವಿ ಕಾಲೇಜುಗಳಲ್ಲಿ ಪ್ರಥಮ ಪದವಿ ತರಗತಿಗಳ ಪ್ರವೇಶದಲ್ಲಿ ಹೆಚ್ಚಿನ ಪಾರದರ್ಶಕತೆ ತರುವ ಬಗ್ಗೆ.

---o---

ಪದವಿ ಕಾಲೇಜುಗಳಲ್ಲಿ ಪ್ರಥಮ ವರ್ಷದ ತರಗತಿಗಳಿಗೆ ಪ್ರವೇಶದಲ್ಲಿ ಹೆಚ್ಚಿನ ಪಾರದರ್ಶಕತೆ ತರುವ ಸದುದ್ದೇಶದಿಂದ ಈ ಕೆಳಕಂಡ ಮಾರ್ಗಸೂಚಿಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ಸುಪ್ರೀಮ್ ಕೋರ್ಟಿನ ತೀರ್ಪಿನ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ. ಇದನ್ನು 2003-2004ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ ವರ್ಷದ ಪದವಿ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವಾಗ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನಿತ ಅಲ್ಪಸಂಖ್ಯಾತ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

1. ತಮ್ಮ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಲಭ್ಯವಿರುವ ಒಟ್ಟು ಪ್ರವೇಶಗಳ ಸಂಖ್ಯೆಯನ್ನು, ಸೂಚನಾಫಲಕದ ಮೇಲೆ / ವೆಬ್‌ಸೈಟ್‌ನಲ್ಲಿ ದಾಖಲಾತಿ ಪ್ರಕ್ರಿಯೆ ಪ್ರಾರಂಭವಾಗುವ ಮೊದಲು ಪ್ರಕಟಿಸಬೇಕು. ಈ ಪ್ರವೇಶ ಸಂಖ್ಯೆಯನ್ನು ಸಂಯೋಜನೆವಾರು ರೋಸ್ಟರ್ ಪದ್ಧತಿ ಪ್ರಕಾರ ಪ್ರಕಟಿಸಬೇಕು. ಪ್ರತಿ ಸಂಯೋಜನೆಯಲ್ಲಿ ಎಷ್ಟು ವರ್ಗಗಳು (Sections) ಇರುತ್ತವೆ ಎಂಬುದನ್ನು ನಮೂದಿಸಬೇಕು. ಈ ರೀತಿಯಲ್ಲಿ ಪ್ರಕಟಿಸಿರುವ ಸಂಯೋಜನೆಗಳಿಗೆ / ವರ್ಗಗಳಿಗೆ ವಿಶ್ವವಿದ್ಯಾನಿಲಯದಿಂದ ಅನುಮತಿ ಪಡೆದಿರಬೇಕು. ಆಯಾ ವಿಶ್ವವಿದ್ಯಾನಿಲಯ ನಿಗದಿ ಪಡಿಸಿದ ಪ್ರಕಾರ ವಿದ್ಯಾರ್ಥಿಗಳನ್ನು ಮಾತ್ರ ದಾಖಲಾತಿ ಮಾಡಿಕೊಳ್ಳಬೇಕು. ಸೂಚನಾಫಲಕದ ಮೇಲೆ ಪ್ರಕಟಿಸಬಹುದಾದ ಮಾಹಿತಿಗೆ ಒಂದು ಉದಾಹರಣೆ ಕೊಡಲಾಗಿದೆ.

ಉದಾ:- ಖಾಸಗಿ ಅನುದಾನಿತ ಕಾಲೇಜು

| | | | |
|---|---|---|---|
| ಕಾಲೇಜಿನಲ್ಲಿ ಲಭ್ಯವಿರುವ ಒಟ್ಟು ಪ್ರವೇಶಗಳು - | | - | 600 |
| ವಿಭಾಗವಾರು/ಸಂಯೋಜನೆವಾರು ಲಭ್ಯವಿರುವ ಪ್ರವೇಶಗಳು - | ವಿಜ್ಞಾನ ವಿಭಾಗ | - | 200 |
| | ವಾಣಿಜ್ಯ ವಿಭಾಗ | - | 100 |
| | ಕಲಾ ವಿಭಾಗ | - | 300 |

C.K. Hebbi
Co-Ordinator
NAAC
S.J.M.V. Mahantha College,
Dharwad.

Principal
S.J.M.V. Mahantha First Grade
Arts & Commerce College,
Rayapur, Dharwad-580 009.

ವಿಭಾಗವಾರು ಲಭ್ಯವಿರುವ ಪ್ರವೇಶಗಳು

| | ಶೇಕಡ | ಬಿ.ಎಸ್ಸಿ | ಬಿ.ಕಾಂ | ಬಿ.ಎ. |
|---|---|---|---|---|
| ಶಿಕ್ಷಣ ಸಂಸ್ಥೆಗೆ ಬಿಡಲಾದ ಪ್ರವೇಶಗಳ ಸಂಖ್ಯೆ : | 20 | 40 | 20 | 60 |
| ಮೆರಿಟ್ ಆಧಾರದ ಮೇಲೆ ಹಂಚಿಕೆಯಾಗುವ ಒಟ್ಟು ಪ್ರವೇಶಗಳ ಸಂಖ್ಯೆ | 80 | 160 | 80 | 240 |

| | ಮೀಸಲಾತಿ ಪ್ರಮಾಣ | ಲಭ್ಯವಿರುವ ಒಟ್ಟು ಪ್ರವೇಶಗಳ ಸಂಖ್ಯೆ | | |
|---|---|---|---|---|
| | ಶೇಕಡ | ಬಿ.ಎಸ್ಸಿ | ಬಿ.ಕಾಂ | ಬಿ.ಎ. |
| | 100% | 200 | 100 | 300 |
| ಪ್ರವರ್ಗ: | | | | |
| ಸಾಮಾನ್ಯ ವರ್ಗ - | 50 | 100 | 50 | 150 |
| ಪರಿಶಿಷ್ಟ ಜಾತಿ - | 15 | 30 | 15 | 45 |
| ಪರಿಶಿಷ್ಟ ಪಂಗಡ - | 03 | 06 | 03 | 09 |
| ವರ್ಗ - 1 - | 04 | 08 | 04 | 12 |
| ವರ್ಗ - 2ಎ - | 15 | 30 | 15 | 45 |
| ವರ್ಗ - 2ಬಿ - | 04 | 08 | 04 | 12 |
| ವರ್ಗ - 3ಎ - | 04 | 08 | 04 | 12 |
| ವರ್ಗ - 3ಬಿ - | 05 | 10 | 05 | 15 |

1. ಕಾಲೇಜಿನಲ್ಲಿ ಬೋಧನೆ ಮಾಡುವ ಸಂಯೋಜನೆಗಳು ಹಾಗೂ ಪ್ರತಿ ಸಂಯೋಜನೆಯಲ್ಲಿರುವ ವಿಷಯಗಳು ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ಪಠ್ಯಕ್ರಮದಲ್ಲಿರುವ ಸಂಯೋಜನೆಗಳ ಗುಂಪಿನಲ್ಲಿರಬೇಕು. ಸರ್ಕಾರದ ಅನುಮತಿ ಇಲ್ಲದೆ ಯಾವುದೇ ಸರ್ಕಾರಿ ಪದವಿ ಕಾಲೇಜಿನಲ್ಲಿ ಹೊಸದಾಗಿ ವಿಷಯವನ್ನಾಗಲಿ ಅಥವಾ ಸಂಯೋಜನೆಯನ್ನಾಗಲಿ ಪ್ರಾರಂಭಿಸಬಾರದು ಹಾಗೂ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಬಾರದು. ಇಲಾಖೆಯ ಲಿಖಿತ ಪೂರ್ವಾನುಮತಿ ಇಲ್ಲದೇ ಕಾಲೇಜಿನ ಹೆಚ್ಚುವರಿ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆ ಮಾಡುವ ದೃಷ್ಟಿಯಿಂದ ಮಾಧ್ಯಮವಾರು (Medium wise) ತರಗತಿಗಳನ್ನು ಪ್ರಾರಂಭಿಸಬಾರದು.
2. ಪ್ರಥಮ ಪದವಿ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಆಯಾ ವಿಶ್ವವಿದ್ಯಾನಿಲಯಗಳ ವೇಳಾಪಟ್ಟಿಯನ್ನು ಅನುಸರಿಸಬೇಕು. ದಾಖಲಾತಿಯ ಪೂರ್ಣ ವೇಳಾಪಟ್ಟಿಯನ್ನು (Calendar of events for admission) ಕಾಲೇಜಿನಲ್ಲಿ ಪ್ರಮುಖವಾದ ಸ್ಥಳದಲ್ಲಿ ಪೋಷಕರ/ವಿದ್ಯಾರ್ಥಿಗಳ ಗಮನಕ್ಕಾಗಿ ಕಡ್ಡಾಯವಾಗಿ ಪ್ರಕಟಿಸಬೇಕು.

C.K. Hubli
Co-Ordinator
NAAC
S.J.M.V. Mahantha College,
Dharwad.

Principal
S.J.M.V. Mahantha First Grade
Arts & Commerce College,
Rayapur, Dharwad-580 009

S.J.M.V. MAHANTHA FIRST GRADE ARTS & COMMERCE COLLEGE RAYAPUR DHARWAD

S.J.M.V. MAHANTHA FIRST GRADE ARTS & COMMERCE COLLEGE
RAYAPUR
DHARWAD



ಪಟ್ಟಿಯಲ್ಲಿ ಎಷ್ಟು ವಿದ್ಯಾರ್ಥಿಗಳು ಶುಲ್ಕ ಕಟ್ಟಿದ್ದಾರೆ ಎಂಬುದನ್ನು ಖಾತರಿಪಡಿಸಿಕೊಂಡು ಇನ್ನುಳಿದ ಪ್ರವೇಶಗಳಿಗೆ ದ್ವಿತೀಯ ಪಟ್ಟಿಯನ್ನು ಪ್ರಥಮ ಪಟ್ಟಿ ಪ್ರಕಟಿಸಿದ ಐದನೇ ದಿವಸ ಪ್ರಕಟಿಸಬೇಕು. ಈ ದ್ವಿತೀಯ ಆಯ್ಕೆಗೊಂಡ ಪಟ್ಟಿಯ ವಿದ್ಯಾರ್ಥಿಗಳಿಗೂ ಸಹ ಶುಲ್ಕ ಕಟ್ಟಲು ಮೂರು ದಿವಸ ಸಮಯ ಕೊಡಬೇಕು. ದ್ವಿತೀಯ ಪಟ್ಟಿ ಪ್ರಕಟಿಸಿದ ಐದು ದಿವಸಗಳ ನಂತರ ತೃತೀಯ ಆಯ್ಕೆಗೊಂಡ ಪಟ್ಟಿಯನ್ನು ಪ್ರಕಟಿಸಬೇಕು. ಅವರಿಗೂ ಸಹ ಶುಲ್ಕ ಕಟ್ಟಲು ಮೂರು ದಿವಸ ಸಮಯ ಕೊಡಬೇಕು. ಅವಶ್ಯಕತೆ ಬಿದ್ದಲ್ಲಿ ಕೊನೆಯದಾಗಿ ಆಯ್ಕೆಗೊಂಡ ಹೆಚ್ಚುವರಿ ಪಟ್ಟಿಯನ್ನು ತೃತೀಯ ಪಟ್ಟಿ ಪ್ರಕಟಿಸಿದ ಐದು ದಿವಸಗಳ ನಂತರ ಪ್ರಕಟಿಸಬೇಕು. ಯಾವುದೇ ಕಾರಣಕ್ಕೆ ಆಯ್ಕೆಗೊಂಡ ನಾಲ್ಕು ಪಟ್ಟಿಗಳಲ್ಲಿ ಇಲ್ಲದ ಹೆಸರುಗಳನ್ನು ಪ್ರಥಮ ಪದವಿ ತರಗತಿಗೆ ದಾಖಲಾತಿ ಮಾಡಿಕೊಳ್ಳಕೂಡದು. ಸಂಸ್ಥೆಯವರಿಗೆ ಬಿಡಲಾದ ಪ್ರವೇಶಗಳಲ್ಲಿ ಸಹ ವಿದ್ಯಾರ್ಥಿಗಳ ಪಟ್ಟಿಯನ್ನು ಹಾಕುವುದು.

ಪ್ರತಿ ಆಯ್ಕೆಗೊಂಡ ಪಟ್ಟಿಯಲ್ಲಿ ವಿದ್ಯಾರ್ಥಿಗಳು ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳನ್ನು ಮತ್ತು ಶೇಕಡವಾರು ಅಂಕಗಳನ್ನು ನಮೂದಿಸಬೇಕು. ಯಾವುದೇ ಕಾರಣಕ್ಕೆ ಕೆಲವು ವಿಷಯಗಳ ಅಂಕಗಳನ್ನು ಮಾತ್ರ ಪರಿಗಣನೆ ಮಾಡಬಾರದು. ಪ್ರತಿ ಪಟ್ಟಿಯನ್ನು ಪ್ರಕಟಿಸಿದಾಗ ವಿವಿಧ ವರ್ಗಗಳಲ್ಲಿ ಸಂಯೋಜನೆವಾರು ಕೊನೆಯ ಪ್ರವೇಶವನ್ನು ಪಡೆದ ವಿದ್ಯಾರ್ಥಿಯ ಒಟ್ಟು ಅಂಕಗಳನ್ನು ಮತ್ತು ಶೇಕಡವಾರು ಅಂಕಗಳನ್ನು ( Cut of point ) ಸೂಚನಾ ಫಲಕದ ಮೇಲೆ ಪ್ರಕಟಿಸಬೇಕು.

ಪ್ರಕಟಿಸಿದ ಆಯ್ಕೆಗೊಂಡ ಪಟ್ಟಿಗಳು ಮತ್ತು ದಾಖಲಾದ ವಿದ್ಯಾರ್ಥಿಗಳ ಪಟ್ಟಿಗಳನ್ನು ಪ್ರವೇಶ ಪ್ರಕ್ರಿಯೆ ಮುಗಿದ ನಂತರ ದೃಢೀಕರಿಸಿ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಕಳುಹಿಸಿಕೊಡಬೇಕು.

ಕಾಲೇಜಿನವರು ತೆಗೆದುಕೊಳ್ಳುವ ಶುಲ್ಕವನ್ನು ಸೂಚನಾ ಫಲಕದ ಮೇಲೆ ಕಡ್ಡಾಯವಾಗಿ ಪ್ರಕಟಿಸಬೇಕು. ತೆಗೆದುಕೊಳ್ಳುವ ಶುಲ್ಕಕ್ಕೆ ರಸೀದಿ ಕೊಡಬೇಕು.

(ಕರಡು ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು.

ಪ್ರತಿ-

1. ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಪದವಿ ಶಿಕ್ಷಣವನ್ನು ಬೋಧಿಸುವ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ.
4. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಆಪ್ತ ಶಾಖೆಗೆ.
5. ಹೆಚ್ಚುವರಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಆಪ್ತ ಶಾಖೆಗೆ.
6. ಜಂಟಿ ನಿರ್ದೇಶಕರು ( ಶೈಕ್ಷಣಿಕ ವಿಭಾಗ) ಕಾಲೇಜು ಶಿಕ್ಷಣ ಇಲಾಖೆ, ಆಪ್ತ ಶಾಖೆಗೆ.
7. ಕಛೇರಿ ಪ್ರತಿ

(C.K. Hubli)
Co-Ordinator
NAAC
S.J.M.V. Mahantha College,
Dharwad.

Principal
S.J.M.V. Mahantha First Grade
Arts & Commerce College,
Rayapur, Dharwad-580 009

SJMV MAHANTHA FIRST GRADE ARTS AND COMMERCE COLLEGE, RAYAPUR, DHARWAD-9.

2.2

RAYAPUR DHARWAD

# GOVERNMENT OF KARNATAKA

No/BCM/SPM/CR-/2013-14

Office of the district officer
Backwad classes welfare department
Dharwad.Dated: 23-01-2015

RAYAPUR DHARWAD

Sub: The details of academic Admission that is given for the other Backward community according to Article 15(4), is to be submitted in the proforma 07 –Regard..

Ref: 1) Government order No.SKE .225.BCW 200 Dated -30-03-2002
2) Government Notification ( Notice ) No-SKE .132 S A D 97 Dated: 8-2-2000
3) Government Notification No.SKE 247 S A D 90 Dated: 22-02-93
4) Commissioner HVKE Bangalore Letter No/HVKE /MS/CR 38/ 2012-13 Dated 21-01-2015

With reference to the Govt (1) order 32% of Academic Admission facility for the other Backward communities has been given.

1) Cat I – 4% 2) Cat- 2a - 15% 3) Cat -2b 4%

4) Cat -3a 4% 5) Cat -3b -5% Total – 32%

According to the above said order 32% Of seats should be earmarked/Reserved for the various OBC groups by the private Aided Institutions, Class wise and course wise. According to ref (3) Notification (13) 2 the Institution should provide the report in proforma ( 7) about the reservation law.

On account of the above mentioned reason, we ask you to sumbit/provide/furnish the details of the admission for various courses for the 1st year in proforma 7 on condition that are mentioned below in 4 copies before 07-02-2015 to the office.

1) Course details, Combination wise of 1st year of 1014-15 qcademic year.
2) Every combination of every course in proforma 7 separately.
3) Yearly report ( Proforma 7) in A4 size horizontly prepared.

Sd/-
District officer
Backwad classes welfare department
Dharwad.

Co-Ordinator
NAAC
S.J.M.V. Mahantha College
Dharwad.

Principal
S.J.M.V. Mahantha First Grade
Arts & Commerce College
Rayapur, Dharwad-580 009

ಕರ್ನಾಟಕ ಸರ್ಕಾರ

ಸಂ/ಬಿಸಿಎಂ/ಶೈಪ್ರಮಾ/ಸಿಆರ್- /2013-14

ಜಿಲ್ಲಾ ಅಧಿಕಾರಿಗಳ ಕಛೇರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಧಾರವಾಡ.ದಿನಾಂಕ : 23-01-2015.

**ಅತೀ ಜರೂರು**

S.J.M.V. MAHANTHA FIRST GRADE ARTS & COMMERCE COLLEGE
RAYAPUR
DHARWAD

ಗೆ,
ಪ್ರಾಂಶುಪಾಲರು,
---------------------------
---------------------------

ಮಾನ್ಯರೆ

Annex

ವಿಷಯ : 2014-15ನೇ ಸಾಲಿನಲ್ಲಿ ಭಾರತ ಸಂವಿಧಾನ ಅನುಚ್ಛೇದ 15(4) ರನ್ವಯ ಹಿಂದುಳಿದ ವರ್ಗಗಳಿಗಾಗಿ ಶೈಕ್ಷಣಿಕ ಪ್ರವೇಶ ನೀಡಿರುವ ವಿವರಗಳನ್ನು ನಮೂನೆ-7 ರಲ್ಲಿ ಸಲ್ಲಿಸುವ ಬಗ್ಗೆ.

ಉಲ್ಲೇಖ 1) ಸರ್ಕಾರದ ಆದೇಶ ಸಂಖ್ಯೆ ಸ.ಕ.ಇ. 225 ಬಿ.ಸಿ.ಎ.2000 ದಿ : 30-3-2002.
2) ಸರ್ಕಾರದ ಅಧಿಸೂಚನೆ ಸಂಖ್ಯೆ ಸ.ಕ.ಇ. 132 ಎಸ್.ಎ.ಡಿ. 97 ದಿ: 8-2-2000
3) ಸರ್ಕಾರದ ಅಧಿಸೂಚನೆ ಸಂಖ್ಯೆ ಸ.ಕ.ಇ. 247 ಎಸ್.ಎ.ಡಿ.90 ದಿ :22-02-93
4) ಆಯುಕ್ತರು, ಹಿಂ.ವ.ಕ.ಇ. ಬೆಂಗಳೂರ ರವರ ಪತ್ರ ಸಂ/ಹಿಂವಕನಿ/ಮಾಶಾ/ಸಿಆರ್-38/2012-13ದಿನಾಂಕ : 21-01-2015.

*****

ಉಲ್ಲೇಖ (1) ರ ಸರ್ಕಾರಿ ಆದೇಶದನ್ವಯ ರಾಜ್ಯದ ಹಿಂದುಳಿದ ವರ್ಗಗಳಿಗೆ ಭಾರತ ಸಂವಿಧಾನದ ಅನುಚ್ಛೇದ 15(4) ರಡಿಯಲ್ಲಿ ಶೈಕ್ಷಣಿಕ ಪ್ರವೇಶಕ್ಕಾಗಿ ಕೆಳಕಂಡಂತೆ ಶೇಕಡಾ 32 ರಷ್ಟು ಮೀಸಲಾತಿ ಸೌಲಭ್ಯವನ್ನು ಕಲ್ಪಿಸಲಾಗಿದೆ.

| | | | | | | | | |
|---|---|---|---|---|---|---|---|---|
| (1) | ಪ್ರವರ್ಗ-1 | ಶೇ. 4 | (2) | ಪ್ರವರ್ಗ-2ಎ | ಶೇ. 15 | (3)ಪ್ರವರ್ಗ-2ಬಿ | ಶೇ. 4 | |
| (4) | ಪ್ರವರ್ಗ-3ಎ | ಶೇ. 4 | (5) | ಪ್ರವರ್ಗ-3ಬಿ | ಶೇ. 5 | ಒಟ್ಟು ಶೇ. 32 | | |

ಇದರನ್ವಯ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನೀಡುವಾಗ ಮೇಲ್ಕಂಡಂತೆ ಶೇಕಡಾ 32 ರಷ್ಟು ಸ್ಥಾನಗಳನ್ನು ವಿವಿಧ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೀಸಲಿರಿಸಿ ವರ್ಗವಾರು ಹಾಗೂ ಕೋರ್ಸವಾರು ಪ್ರವೇಶ ನೀಡಬೇಕಾಗಿರುತ್ತದೆ. ಉಲ್ಲೇಖ(3) ರ ಅಧಿಸೂಚನೆಯ ನಿಯಮ-13(2) ರ ಪ್ರಕಾರ ಶಿಕ್ಷಣ ಸಂಸ್ಥೆಯವರು ಹಿಂದುಳಿದ ವರ್ಗಗಳಿಗೆ ನಿಯಮಾನುಸಾರ ನಿಗದಿತ ಮೀಸಲಾತಿಯಂತೆ, ಶೈಕ್ಷಣಿಕ ಪ್ರವೇಶ ನೀಡಿರುವ ಬಗ್ಗೆ ವಾರ್ಷಿಕ ವರದಿಯನ್ನು ನಮೂನೆ-7ರಲ್ಲಿ ಸಲ್ಲಿಸಬೇಕಾಗಿರುತ್ತದೆ.

ಪ್ರಯುಕ್ತ ತಮ್ಮ ವಿದ್ಯಾ ಸಂಸ್ಥೆಗಳಲ್ಲಿ 2014-15 ನೇ ಸಾಲಿನಲ್ಲಿ ವಿವಿಧ ಕೋರ್ಸಿನ ಪ್ರಥಮ ವರ್ಷಕ್ಕೆ ಪ್ರವೇಶ ನೀಡಿದ ಬಗ್ಗೆ ನಮೂನೆ-7 ರಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಮಾಹಿತಿ ತಯಾರಿಸಿ 4 ಪ್ರತಿಯಲ್ಲಿ ಈ ಕಛೇರಿಗೆ ದಿನಾಂಕ :07-02-2015 ರೊಳಗೆ ಕಳುಹಿಸಿಕೊಡಲು ಕೋರಲಾಗಿದೆ.

1. 2014-15ನೇ ಸಾಲಿನಲ್ಲಿ ಪ್ರತಿ ಕೋರ್ಸಿನ ವಿವರ ಕಾಂಬಿನೇಷನಗಳ ಪ್ರಥಮ ವರ್ಷ ಪ್ರವೇಶದ ವಿವರಗಳನ್ನು ನಮೂನೆ-7 ರಲ್ಲಿ ನಮೂದಿಸುವದು.
2. ಪ್ರತಿ ಕೋರ್ಸಿನ ಪ್ರತಿಯೊಂದು ಕಂಬೀನೇಷನ ಮಾಹಿತಿ ನಮೂನೆ-7 ರಲ್ಲಿ ಪ್ರತ್ಯೇಕವಾಗಿರುವಂತೆ ನಮೂದಿಸುವದು.
3. ವಾರ್ಷಿಕ ವರದಿಯನ್ನು (ನಮೂನೆ-7) ನ್ನು ಎ-4 ಸೈಜಿನ ದಪ್ಪ ಹಾಳೆಯಲ್ಲಿ ಅಡ್ಡವಾಗಿ ಸಿದ್ಧಪಡಿಸಿ ಕಂಬೀನೇಷನ ಪ್ರಕಾರ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಕಳುಹಿಸುವುದು.

ತಮ್ಮ ವಿಶ್ವಾಸಿ,

ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಧಾರವಾಡ.

To

Co-Ordinator
NAAC
S.J.M.V. Mahanth College, Dharwad

Principal
S.J.M.V. Mahantha First Grade
Arts & Commerce College
Rayapur, Dharwad-580 009

12/2/15

ಪ್ರತಿಯನ್ನು :-

1) ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,ಬೆಂಗಳೂರು. ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತೀರ್ಣಾಧಿಕಾರಿಗಳು, ಧಾರವಾಡ,ಹುಬ್ಬಳ್ಳಿ, ಕಲಘಟಗಿ, ಕುಂದಗೋಳ ಮತ್ತು ನವಲಗುಂದ ಇವರಿಗೆ ಕಳುಹಿಸುತ್ತಾ ...